


## ದೇಶವ್ಯಾಪಿ ಸಾವಯವ ಕೃಷಿ ಮಾಹಿತಿಗೆ

## www.ofai.org

ನೀವು ಸಾವಯವ ಕೃಷಿಕ ಅಥವಾ ಸಾವಯವ ಕೃಷಿಗೆ ಸಂಬಂಧಪಟ್ಟವರಾಗಿದ್ದರೆ ಈ ಜಾಲತಾಣವನ್ನು ತಪ್ಪಿಸಿಕೊಳ್ಳುವ ಹಾಗೇ ಇಲ್ಲ!

ಮುಖ್ಯವಾಹಿನಿಯಲ್ಲಿನ ಮಾಧ್ಯಮಗಳ ಬೆಳಕು ಕೃಷಿರಂಗಕ್ಕೆ ಬೀಳುವುದು ಕಡಿಮೆ. ಅದರಲ್ಲೂ ರಾಜ್ಯಗಳ ನಡುವೆ ಕೃಷಿ – ಸಂವಹನದ ಕೊರತೆ ಇರುವುದರಿಂದ, ನಮಗೆ ಯಾವುದೇ ರಾಜ್ಯದ ಕೃಷಿರಂಗದಲ್ಲಿ ಏನು ಬೆಳವಣಿಗೆ ನಡೆದಿದೆ/ಯುತ್ತಿದೆ ಅನ್ನುವುದೇ ಕಿವಿ/ಕಣ್ಣಿಗೆ ಬೀಳುವುದಿಲ್ಲ. ಆದರೆ ಸಾವಯವ ಕೃಷಿಗೆ ಸಂಬಂಧಪಟ್ಟಂತೆ ಈ ಕೊರತೆಯನ್ನು ಒಫೈ ಜಾಲತಾಣ ತುಂಬಿಕೊಡುವ ಹಾಗಿದೆ! ಕರ್ನಾಟಕವೂ ಸೇರಿದಂತೆ ಹಲವಾರು ರಾಜ್ಯಗಳ ಅಪೂರ್ವ ಸಾವಯವ ಕೃಷಿ ಮಾಹಿತಿ ಒಂದೆಡೆಯಲ್ಲಿ ಲಭ್ಯ.

2002ರಲ್ಲಿ ಸ್ಥಾಪನೆಯಾದ ಭಾರತೀಯ ಸಾವಯವ ಕೃಷಿ ಸಂಘಟನೆಯ (ಆರ್ಗಾನಿಕ್ ಫಾರ್ಮಿಂಗ್ ಅಸೋಸಿಯೇಶನ್ ಆಫ್ ಇಂಡಿಯಾ – ಒಫೈ) ಜಾಲತಾಣವಿದು. ಈ ಸಂಘಟನೆಯ ಉದ್ದೇಶ – ಸಾವಯವ ಕೃಷಿಗೆ ಪ್ರೋತ್ಸಾಹ, ಸರ್ಕಾರದ ನೀತಿನಿರೂಪಣೆಯಲ್ಲಿ ಸುಸ್ಥಿರ ಕೃಷಿಯ ಬಗ್ಗೆ ಪ್ರಭಾವ ಬೀರುವುದು ಹಾಗೂ ರಾಸಾಯನಿಕಗಳನ್ನು ಬಳಸುವ ರೈತರನ್ನು ಸಾವಯವ ಕೃಷಿಯತ್ತ ತರುವ ಕೆಲಸ. ಜೊತೆಗೆ ಬಳಕೆದಾರರಲ್ಲಿ ಈ ಬಗ್ಗೆ ಅರಿವು ಮೂಡಿಸುವುದು. ಸಾವಯವ ಕೃಷಿ ಉತ್ಪನ್ನಗಳ ವ್ಯಾಪಾರದಲ್ಲಿ ತೊಡಗಿರುವ ವ್ಯಕ್ತಿ, ಸಮುದಾಯ, ಸಂಘ – ಸಂಸ್ಥೆಗಳನ್ನೂ ಇದು ಉತ್ತೇಜಿಸುತ್ತದೆ. ಇದರ ಅಧ್ಯಕ್ಷರೂ ಸಾವಯವ ಕೃಷಿಕರೇ! ಕರ್ನಾಟಕದಿಂದ ಇದುವರೆಗೆ ಸುಮಾರು 376 ಸದಸ್ಯರಿದ್ದಾರೆ.

ಈ ಸಂಘಟನೆ ಸಾವಯವ ದೃಢೀಕರಣ ಪ್ರಕ್ರಿಯೆಯಲ್ಲಿ ಸಹಾಯ ಮಾಡುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಸಾವಯವ ಕೃಷಿಯ ಹಾಗೂ ಕೃಷಿಕರ ಬಗ್ಗೆ ಅರಿವು ಮೂಡಿಸುತ್ತದೆ. ಗೋವಾದಲ್ಲಿ ಕೇಂದ್ರ ಕಚೇರಿ ಹೊಂದಿರುವ ಈ ಸಂಘಟನೆ ಅಂತಾರಾಷ್ಟ್ರೀಯ ಸಾವಯವ ಕೃಷಿ ಒಕ್ಕೂಟದ (ಇಫೋಮ್) ಸಹಯೋಗ ಹೊಂದಿದೆ.

ಈ ಜಾಲತಾಣದ ಹಿಂದಿರುವ ಶಕ್ತಿ ಡಾ. ಕ್ಲಾಡ್ ಆಲ್ವಾರಿಸ್. ಇವರು ಈ ಸಂಸ್ಥೆಯ ಸ್ಥಾಪಕ ಕಾರ್ಯದರ್ಶಿ. ಜೊತೆಗೆ ದೇಶದ ಸಾವಯವ ಕೃಷಿಯ ಬಗ್ಗೆ ವಿಸ್ತಾರ ಮಾಹಿತಿ ಇರುವ "ಸಾವಯವ ಕೃಷಿ ಸಂಪನ್ಮೂಲ" ಹೊತ್ತಗೆಯ ಸಂಪಾದಕ. ತಾವು ಹಮ್ಮಿಕೊಳ್ಳುವ ಕಾರ್ಯಕ್ರಮಗಳ ಬಗ್ಗೆ, ಮಾತನಾಡುವ ವಿಷಯದ ಬಗ್ಗೆ ತಳಸ್ಪರ್ಶಿ ಸ್ಪಷ್ಟತೆ ಇವರ ವೈಶಿಷ್ಟ್ಯ. ಇದರಂತೆಯೇ ಜಾಲತಾಣ ರೂಪುಗೊಂಡಿದೆ.

ಈ ಜಾಲತಾಣದಲ್ಲಿ ಸುದ್ದಿ, ಸಂಸ್ಥೆ, ಸಂಪನ್ಮೂಲ ಹಾಗೂ ವಾರ್ತಾಪತ್ರ ವಿಭಾಗಗಳಿವೆ. ಆದರೆ ನೋಡಲೇ ಬೇಕಾದ ವಿಭಾಗ 'ಸಂಪನ್ಮೂಲ'. ಸಮೃದ್ಧ ಮಾಹಿತಿ ಇಲ್ಲಿದೆ. ಸಾವಯವ ಕೃಷಿಗೆ ಸಂಬಂಧಪಟ್ಟಂತೆ ನಮ್ಮ ದೇಶದ 27 ರಾಜ್ಯಗಳ ಹಲವಾರು ಕೃಷಿಕರ ಹಾಗೂ ಅವರ ಸಾಧನೆಗಳ ಮಾಹಿತಿ, ಹದಿನಾಲ್ಕು ರಾಜ್ಯಗಳಲ್ಲಿರುವ ನೂರಕ್ಕೂ ಹೆಚ್ಚು ಸಾವಯವ ಮಳಿಗೆಗಳ ವಿಳಾಸ, ಒಂಭತ್ತು ಕೃಷಿ ಕೈಪಿಡಿಗಳು, ಎಂಟು ಅಮೂಲ್ಯ ಪುಸ್ತಕಗಳು, 100ಕ್ಕೂ ಹೆಚ್ಚು ವಿಶಿಷ್ಟ ಲೇಖನಗಳು, ಇಪ್ಪತ್ತೈದು ಸಂಸ್ಥೆಗಳ ಕೊಂಡಿಗಳು, ಹನ್ನೆರಡು ಕಾರ್ಯಕ್ರಮಗಳ ವರದಿಗಳು, ಎಂಟು ರಾಜ್ಯಗಳ ಸಾವಯವ ಕೃಷಿ ನೀತಿಗಳು, ಖ್ಯಾತ ಚಿಂತಕ ದೇವಿಂದರ್ ಶರ್ಮಾರ ವೀಡಿಯೋಗಳು ಸೇರಿದಂತೆ ಇಪ್ಪತ್ತು ಅನನ್ಯ ವೀಡಿಯೋಗಳು ಉಚಿತವಾಗಿ ಸಿಗುತ್ತವೆ.

ಸಂಸ್ಥೆ ವಿಭಾಗದಲ್ಲಿ ಧ್ಯೇಯೋದ್ದೇಶಗಳು, ಪದಾಧಿಕಾರಿಗಳು, ಸದಸ್ಯತ್ವದ ಮಾಹಿತಿ, ಸಾವಯವ ದೃಢೀಕರಣ ಮತ್ತು ಲೇಬಲಿಂಗ್ ಹಾಗೂ ಸಾವಯವ ಕೃಷಿಗೆ ಸಂಬಂಧಿಸಿದ ಹಿಂದೆ ನಡೆದ ಕಾರ್ಯಕ್ರಮಗಳ ಪಟ್ಟಿ ಇದೆ. ಸುದ್ದಿ ವಿಭಾಗದಲ್ಲಿ ದೇಶದ ವಿವಿಧ ಭಾಗಗಳ ಸಾವಯವ ಕೃಷಿಯ ಸುದ್ದಿ ಹಾಗೂ ಕಾರ್ಯಕ್ರಮಗಳ ವಿವರ ಸಿಗುತ್ತದೆ. ಇದು ದೇಶದ ಸಂಪೂರ್ಣ ಚಿತ್ರಣ ಪಡೆಯಲು ಸಹಕಾರಿ.

ವಾರ್ತಾಪತ್ರ ವಿಭಾಗದಲ್ಲಿ 'ದಿ ಲಿವಿಂಗ್ ಫೀಲ್ಡ್' – ಈ ಸಂಸ್ಥೆಯ ಅಧಿಕೃತ ಸುದ್ದಿಪತ್ರ – ಇದರ ಸಂಚಿಕೆಗಳು ಸಿಗುತ್ತವೆ. ಹಿಂದಿ ಆವೃತ್ತಿ 'ಸಸ್ಯ ಶ್ಯಾಮಲ' ಕೂಡಾ. ಜೊತೆಗೆ ಬೆಂಗಳೂರಿನ ಇಕ್ರಾ ಸಂಸ್ಥೆಯ ಪ್ರಕಟಣೆಯಾದ 'ಸಹಜ ಸಾಗುವಳಿ', ತಮಿಳುನಾಡಿನಲ್ಲಿರುವ ಆರೋವಿಲ್ಲೆಯ 'ಪೆಬಲ್ ಗಾರ್ಡನ್' ಸಂಚಿಕೆಗಳೂ ಲಭ್ಯ.

ಅತ್ಯಂತ ಸರಳ ಆದರೆ ಅಷ್ಟೇ ಪರಿಣಾಮಕಾರಿಯಾದ ವಿನ್ಯಾಸ ಜಾಲತಾಣದ್ದು. ಕ್ಲಿಕ್ ಮಾಡಿದಾಗ ಅಲ್ಲೇ ಮಾಹಿತಿ ಸಿಗುವಂತೆ ಮಾಡುವ 'ಅಜಾಕ್ಸ್' ವ್ಯವಸ್ಥೆಯನ್ನು ಬಳಸಿದ್ದಾರೆ. ಆದರೆ ಸಂಸ್ಥೆಯ ಲೋಗೋ ಬಿಟ್ಟರೆ ಎಲ್ಲೂ ಸಂಕೇತ ಹಾಗೂ ಚಿತ್ರಗಳ ಬಳಕೆ ಇಲ್ಲವೇ ಇಲ್ಲ!

http://www. ಜಾಲ ಜಗತ್ತು

● ಡಾ. ಮೋಹನ್ ತಲಕಾಲುಕೊಪ್ಪ
99022 73468

### ಜಾಲತಂತ್ರ

ಚಾಲನೆ ಮಾಡುತ್ತಿದ್ದಂತೆಯೇ, ಆ ದಿನ ಮಾಡಬೇಕಾದ ಕೆಲಸಗಳ ಬಗ್ಗೆ ಕಂಪ್ಯೂಟರೇ ಎಚ್ಚರಿಸುವಂತಿದ್ದರೆ ಎಷ್ಟು ಚೆನ್ನ? ಇದಕ್ಕಾಗಿ ಡೆಸ್ಕ್‌ಟಾಪಿನಲ್ಲಿ ಹಾಕಬಹುದಾದ ಸರಳ ಕ್ಯಾಲೆಂಡರನ್ನು www.tinnes.co.uk ಜಾಲತಾಣದಿಂದ ಇಳಿಸಿಕೊಂಡು ನಿಮ್ಮ ಗಣಕದಲ್ಲಿ ಸ್ಥಾಪಿಸಿಕೊಳ್ಳಬಹುದು. ವಿಂಡೋಸ್ 7, ವಿಸ್ತಾ ಮತ್ತು ಎಕ್ಸ್‌ಪಿ ಆಪರೇಟಿಂಗ್ ವ್ಯವಸ್ಥೆಗಳಿಗೆ ಇದು ಲಭ್ಯ. ಇದರಲ್ಲಿ ಆಯಾ ದಿನ, ವಾರ, ತಿಂಗಳುಗಳಲ್ಲಿ ಮಾಡಬೇಕಾದ ಕೆಲಸಗಳನ್ನು ನಮೂದಿಸಿದರೆ ಮುಂದಿನ ಕೆಲಸ ಕ್ಯಾಲೆಂಡರೇ ಮಾಡುತ್ತದೆ! ಕ್ಯಾಲೆಂಡರಿನ ಮೇಲೆ ರೈಟ್ ಕ್ಲಿಕ್ ಮಾಡಿ 'ಸೆಟ್ಟಿಂಗ್ಸ್'ಗೆ ಹೋದರೆ ಲಭ್ಯ ಸೌಲಭ್ಯಗಳ ಪರಿಚಯ ಸಿಗುತ್ತದೆ. ❖

**ಏಜೆನ್ಸಿ – ಜಾಹೀರಾತು ವಿವರಗಳಿಗೆ**

ಜಾಹೀರಾತು ಮತ್ತು ಏಜೆನ್ಸಿ ವಿವರ ಬೇಕಾದವರು ಈ ನಂಬರಿಗೆ ಎಸ್ಸೆಮ್ಮೆಸ್ ಮಾಡಿ 94833 65791.
ನಿಮ್ಮನ್ನು ನಾವೇ ಸಂಪರ್ಕಿಸುತ್ತೇವೆ.